**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನ ಸಭೆ**

**ಆರನೇ ಅಧಿವೇಶನ**

**(ಮುಂದುವರೆದ ಉಪವೇಶನ)**

# ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 12)**

ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

21ಎ ಅನುಚ್ಛೇದದ ಅಡಿಯಲ್ಲಿ ಎಲ್ಲ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಅವರ ಮಾತೃಭಾಷೆಯಲ್ಲಿ ಸಮಾನ ಶಿಕ್ಷಣದ ಅವಕಾಶವನ್ನು ಕಲ್ಪಿಸುವುದಕ್ಕಾಗಿ, ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009ನ್ನು (2009ರ ಕೇಂದ್ರ ಅಧಿನಿಯಮ 35) ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾಷೆಯ ಆಧಾರದ ಮೇಲೆ ರಚನೆಯಾದ ರಾಜ್ಯಗಳ ಆಧಾರಿತ ಒಕ್ಕೂಟ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದು ಅತ್ಯಂತ ಪ್ರಮುಖವಾಗಿರುವುದರಿಂದ;

2013ರ ಸಿವಿಲ್ ಅಪೀಲು ಸಂಖ್ಯೆ:5166–5190 ಮತ್ತು ಸಂಬಂಧಿತ ವಿಷಯಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಒತ್ತುಗೊಟ್ಟು ಘೋಷಿಸಿರುವುದರಿಂದ;

"ಒಂದು ಮಗುವು ರಾಜ್ಯದಿಂದ ಕ್ಲೇಮು ಮಾಡಬಹುದಾದ ಅಂಥ ಉಚಿತ ಶಿಕ್ಷಣವು, ರಾಜ್ಯವು, ಕಾನೂನಿನ ಮೂಲಕ, ನಿರ್ದಿಷ್ಟಪಡಿಸಹುದಾದ ವಿಧಾನದಲ್ಲಿರಬೇಕು ಎಂಬುದನ್ನು ಸಂವಿಧಾನದ 21ಎ ಅನುಚ್ಛೇದವು ಮತ್ತಷ್ಟು ಸ್ಪಷ್ಟಪಡಿಸುತ್ತದೆ. ಆದ್ದರಿಂದ, ಸಂವಿಧಾನದ 21ಎ ಅನುಚ್ಛೇದದ ಅಡಿಯಲ್ಲಿ ಉಚಿತ ಶಿಕ್ಷಣವನ್ನು ಕಲ್ಪಿಸಲಾಗುತ್ತಿರುವ ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮವು ಮಾತೃಭಾಷೆಯಲ್ಲಿ ಅಥವಾ ಇತರ ಯಾವುದೇ ಭಾಷೆಗಳಲ್ಲಿ ಇರತಕ್ಕದ್ದೆಂದು, ರಾಜ್ಯವು ಕಾನೂನಿನ ಮೂಲಕ ನಿರ್ಧರಿಸಿದರೆ, ಒಂದು ಮಗುವು ತಾನು ಆಯ್ಕೆ ಮಾಡಿಕೊಂಡ ಮಾಧ್ಯಮದಲ್ಲಿ ರಾಜ್ಯವು ಶಿಕ್ಷಣವನ್ನು ನೀಡಬೇಕೆಂದು ಸಂವಿಧಾನದ ಅನುಚ್ಛೇದ 21 ಅಥವಾ ಅನುಚ್ಛೇದ 21ಎ ಅಡಿಯಲ್ಲಿ ಕ್ಲೇಮು ಮಾಡುವಂತಿಲ್ಲ."

ಆದ್ದರಿಂದ, ಹಾಗೂ ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 29ನೇ ಪ್ರಕರಣದ ತಿದ್ದುಪಡಿ.–** ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009ರ (2009ರ ಕೇಂದ್ರ ಅಧಿನಿಯಮ 35) 29ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡದಲ್ಲಿ "ಸಾಧ್ಯವಾಗಬಹುದಾದಷ್ಟು ಮಟ್ಟಿಗೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1994ರಲ್ಲಿ ರಾಜ್ಯ ಸರ್ಕಾರವು 1ನೇ ತರಗತಿಯಿಂದ 5ನೇ ತರಗತಿಯವರೆಗೆ ಮಾಧ್ಯಮದ ಬಗ್ಗೆ ಭಾಷಾ ನೀತಿಯನ್ನು ರಚಿಸಿತು. ದಿನಾಂಕ:29.04.1994ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 24 ಪಿಜಿಸಿ 1994ರಲ್ಲಿ ರಾಜ್ಯ ಸರ್ಕಾರವು 1994–95ನೇ ಶೈಕ್ಷಣಿಕ ವರ್ಷದಿಂದ ರಾಜ್ಯ ಸರ್ಕಾರವು ಮಾನ್ಯತೆ ನೀಡಿದ ಎಲ್ಲಾ ಶಾಲೆಗಳಲ್ಲಿ ಮಾತೃಭಾಷೆ ಅಥವಾ ಕನ್ನಡವನ್ನು ಶಿಕ್ಷಣದ ಮಾಧ್ಯಮವಾಗಿರಬೇಕೆಂದು ಆದೇಶಿಸಿದೆ.

ಆದರೆ, ಕೆಲವು ಖಾಸಗಿ ಶಾಲೆಗಳು, ಕನ್ನಡ ಮಾಧ್ಯಮದಲ್ಲಿ ಶಾಲೆಯನ್ನು ನಡೆಸುವುದಕ್ಕೆ ಅನುಮತಿಯನ್ನು ಪಡೆದಿದ್ದು ಭಾಷಾ ನೀತಿಯನ್ನು ಉಲ್ಲಂಘಿಸಿ ಆಂಗ್ಲ ಮಾಧ್ಯಮದಲ್ಲಿ ನಡೆಸುತ್ತಿವೆ.

ಕರ್ನಾಟಕ ರಾಜ್ಯ ಅನುದಾನರಹಿತ ಶಾಲಾ ವ್ಯವಸ್ಥಾಪನಾ ಸಂಘಟನೆಯು ಭಾಷಾ ನೀತಿಯನ್ನು ನ್ಯಾಯಾಲಯದಲ್ಲಿ ವಿವಿಧ ಹಂತಗಳಲ್ಲಿ ಪ್ರಶ್ನಿಸಿದೆ. ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯದ ಪೂರ್ಣಪೀಠವು ದಿನಾಂಕ:02.07.2008ರ ರಿಟ್‌ಪಿಟಿಷನ್ ಸಂಖ್ಯೆ: 14863/1994 (ಶಿಕ್ಷಣ)ರ ದಿನಾಂಕ: 24.04.1994ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 24 ಪಿಜಿಸಿ 1994ನ್ನು ರದ್ದುಪಡಿಸಿದೆ.

ದಿನಾಂಕ:02.07.2008ರ ಆದೇಶವನ್ನು ರಾಜ್ಯಸರ್ಕಾರವು ರಿಟ್‌ಪಿಟಿಷನ್ ಸಂಖ್ಯೆ: 290/2009ರಲ್ಲಿ ಭಾರತದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಮೇಲಿನ ಪ್ರಶ್ನಿಸಿತು. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಯಥಾಸ್ಥಿತಿಯನ್ನು ಕಾಪಾಡುವಂತೆ ನಿರ್ದೇಶಿಸಿ ದಿನಾಂಕ:21.07.2009ರಲ್ಲಿ ಮಧ್ಯಂತರ ಆದೇಶವನ್ನು ಹೊರಡಿಸಿತು. ತದನಂತರ 05.07.2013ರಂದು ಪ್ರಕರಣವನ್ನು ಸಂವಿಧಾನಿಕ ಪೀಠಕ್ಕೆ ವರ್ಗಾಯಿಸಲಾಯಿತು. ದಿನಾಂಕ:06.05.2014ರ ಸಿವಿಲ್ ಅಪೀಲು ಸಂಖ್ಯೆ: 5166–5190/2013ರಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು "ಸರ್ಕಾರವು ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಕಲಿಸುವುದಕ್ಕಾಗಿ ಮಾತೃಭಾಷೆಯನ್ನು ಹೇರುವಂತಿಲ್ಲ" ಎಂದು ಆದೇಶಿಸಿದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ, ಭಾರತದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಾಜ್ಯದ ಭಾಷಾ ನೀತಿಯನ್ನು ತಿರಸ್ಕರಿಸಿರುವುದರಿಂದ, ರಾಜ್ಯ ಸರ್ಕಾರವು ರಿವ್ಯೂ ಪಿಟಿಷನ್ ಸಂಖ್ಯೆ: 1878–1911/2014ನ್ನು ಸಲ್ಲಿಸಿದೆ. ದಿನಾಂಕ:09.09.2014ರಂದು ರಿಟ್ ಪಿಟಿಷನ್‌ನ್ನು ವಜಾಗೊಳಿಸಲಾಯಿತು.

ಸಂವಿಧಾನದ 350ಎ ಅನುಚ್ಛೇದವು ಈ ಮುಂದಿನಂತಿದೆ:–

"**350ಎ. ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಸೌಲಭ್ಯಗಳು:–** ಭಾಷಾ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಮಕ್ಕಳಿಗೆ ವಿದ್ಯಾಭ್ಯಾಸದ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣಕ್ಕಾಗಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು ಪ್ರತಿಯೊಂದು ರಾಜ್ಯವು ಮತ್ತು ಆ ರಾಜ್ಯದಲ್ಲಿನ ಪ್ರತಿಯೊಂದು

ಸ್ಥಳೀಯ ಪ್ರಾಧಿಕಾರವೂ ಪ್ರಯತ್ನಿಸತಕ್ಕದ್ದು ಮತ್ತು ಅಂಥ ಸೌಲಭ್ಯಗಳನ್ನು ಒದಗಿಸುವುದನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ರಾಷ್ಟ್ರಪತಿಯು ತಾನು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ಯಾವುದೇ ರಾಜ್ಯಕ್ಕೆ ಕೊಡಬಹುದು."

ಸಂವಿಧಾನದ 350ಎ ಅನುಚ್ಛೇದದ ಅನ್ವಯ ಮಗುವಿಗೆ ಆತನ/ಆಕೆಯ ಮಾತೃಭಾಷೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಒದಗಿಸುವುದು ಸಂಬಂಧಪಟ್ಟ ರಾಜ್ಯಗಳ ಸಂವಿಧಾನಿಕ ಕರ್ತವ್ಯವಾಗಿದೆ. ಇದನ್ನು ಶಿಕ್ಷಣ ತಜ್ಞರು, ಬುದ್ಧಿಜೀವಿಗಳು ಮತ್ತು ಬರಹಗಾರರೊಂದಿಗೆ ಸವಿಸ್ತಾರವಾಗಿ ಚರ್ಚಿಸಲಾಗಿ ಅವರು ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣದ ಅವಶ್ಯಕತೆಯನ್ನು ಅವಿರೋಧವಾಗಿ ಒಪ್ಪಿದ್ದಾರೆ.

ಆದುದರಿಂದ, ರಾಜ್ಯದಲ್ಲಿ ಮಗುವಿನ ಮಾತೃಭಾಷೆ ಅಥವಾ ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣ (1ನೇ ತರಗತಿಯಿಂದ 5ನೇ ತರಗತಿಯವರೆಗೆ) ಒದಗಿಸಲು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009ಕ್ಕೆ (2009ರ ಕೇಂದ್ರ ಅಧಿನಿಯಮ 35) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕಿಮ್ಮನೆ ರತ್ನಾಕರ**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

**ಪಿ. ಓಂಪ್ರಕಾಶ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

## ಅನುಬಂಧ

### ಉಚಿತ ಮತ್ತು ಕಡ್ಡಾತ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009ರ

### (2009ರ ಕೇಂದ್ರ ಅಧಿನಿಯಮ 35) ಉದ್ಧೃತ ಭಾಗ

**29. ಪಠ್ಯ ವಿಷಯ ಮತ್ತು ಮೌಲ್ಯಮಾಪನಾ ಪ್ರಕ್ರಿಯೆ.–** (1) ಪ್ರಾಥಮಿಕ ಶಿಕ್ಷಣದ ಪಠ್ಯ ವಿಷಯವನ್ನು ಮತ್ತು ಮೌಲ್ಯಮಾಪನ ಪ್ರಕ್ರಿಯೆಯನ್ನು, ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸುವ ಶೈಕ್ಷಣಿಕ ಪ್ರಾಧಿಕಾರವು ಗೊತ್ತುಪಡಿಸತಕ್ಕದ್ದು.

(2) ಶೈಕ್ಷಣಿಕ ಪ್ರಾಧಿಕಾರವು, (1)ನೇ ಉಪ–ಪ್ರಕರಣದ ಮೇರೆಗೆ ಪಠ್ಯ ವಿಷಯವನ್ನು ಮತ್ತು ಮೌಲ್ಯಮಾಪನ ಪ್ರಕ್ರಿಯೆಯನ್ನು ಗೊತ್ತುಪಡಿಸುವಾಗ, ಈ ಮುಂದಿನವುಗಳನ್ನು ಪರಿಗಣಿಸತಕ್ಕದ್ದು, ಎಂದರೆ:–

(ಎ) ಸಂವಿಧಾನದಲ್ಲಿ ಹೇಳಿರುವ ಮೌಲ್ಯಗಳಿಗೆ ಅನುಗುಣವಾಗಿರುವುದು;

(ಬಿ) ಮಕ್ಕಳ ಸರ್ವಾಂಗೀಣ ಅಭಿವೃದ್ಧಿ;

(ಸಿ) ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಯ ವರ್ಧನೆ;

(ಡಿ) ಪೂರ್ಣ ಪ್ರಮಾಣದಲ್ಲಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ವಿಕಸನ;

(ಇ) ಮಗು ಸ್ನೇಹೀ ಮತ್ತು ಮಗು ಕೇಂದ್ರಿತ ವಾತಾವರಣದಲ್ಲಿ ಚಟುವಟಿಕೆಗಳು, ಶೋಧನೆಮತ್ತು ಅನ್ವೇಷಣೆ ಮೂಲಕ ಕಲಿಕೆ;

(ಎಫ್)ಶಿಕ್ಷಣ ಮಾಧ್ಯಮವು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆಯಲ್ಲಿರತಕ್ಕದ್ದು;

(ಜಿ) ಮಗುವಿನ ಭಯವನ್ನು, ಆಘಾತವನ್ನು ಹಾಗೂ ಆತಂಕವನ್ನು ಹೋಗಲಾಡಿಸುವುದು ಮತ್ತು ಮಗು ಮುಕ್ತವಾಗಿ ತನ್ನ ಅನಿಸಿಕೆಗಳನ್ನು ಹೇಳಿಕೊಳ್ಳುವುದಕ್ಕೆ ನೆರವಾಗುವುದು;

(ಎಚ್) ಮಗುವಿನ ಜ್ಞಾನದ ಗ್ರಹಿಕೆಯನ್ನು ಮತ್ತು ಅದನ್ನು ಅನ್ವಯಿಸುವುದಕ್ಕೆ ಆತ ಅಥವಾ ಆಕೆ ಹೊಂದಿರುವ ಸಾಮರ್ಥ್ಯವನ್ನು ಸಮಗ್ರವಾಗಿ ಹಾಗೂ ನಿರಂತರವಾಗಿ ಮೌಲ್ಯ ಮಾಪನ ಮಾಡುವುದು.

**XXX XXX XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750–ಪ್ರತಿಗಳು 25ನೇ ಮಾರ್ಚ್, 2015

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**SIXTH SESSION**
**(ADJOURNED MEETINGS)**

# THE RIGHT OF CHILDREN TO FREE AND COMPULSORY EDUCATION (KARNATAKA AMENDMENT) BILL, 2015

**(L.A. Bill No. 12 of 2015)**

A Bill further to amend the Right of Children to Free and Compulsory Education Act, 2009 in its application to the State of Karnataka.

Whereas it is expedient further to amend the Right of Children to Free and Compulsory Education Act, 2009 (Central Act 35 of 2009), in its application to the State of Karnataka, in order to provide equal education to all children in their mother tongue at primary stage, as a fundamental right under Article 21A of the constitution;

Whereas it is of utmost importance to sustain the federal structure based on the formation of States on the basis of language;

Whereas the Constitution Bench of the Hon'ble Supreme Court in Civil Appeal Nos. 5166 – 5190 of 2013 and connected matters, has emphatically declared;

> "The language of Article 21A of the Constitution further makes it clear that such free education which a child can claim from the State will be in a manner as the State may, by law, determined. If therefore, the State determines by law that in schools where free education is provided under Article 21A of the Constitution, the medium of instruction would be in the mother tongue or in any language, the child cannot claim as of right under Article 21 or Article 21A of the constitution that he has a

right to choose the medium of instruction in which the education should be imparted to him by the State."

Now therefore, and for the purposes hereinafter appearing;

Be it enacted by the Karnataka State Legislature in the sixty sixth year of the Republic of India as follows:-

**1. Short title and Commencement .-** (1) This Act may be called the Right of Children to Free and Compulsory Education (Karnataka Amendment) Act, 2015.

(2) It shall come into force at once.

**2. Amendment of Section 29.-** In section 29 of the Right of children to free and compulsory education Ac, 2009 (Central Act 35 of 2009), in sub section (2), in clause (f), the words and punctuation mark "as far as practicable," shall be omitted.

## STATEMENT OF OBJECTS AND REASON

The State Government constituted the language policy regarding the medium of instruction from 1st std to 5th std in 1994. In Government order No. ED 24 PGC 1994 dated 29.04.1994 the State Government ordered that the mother tongue or Kannada as the medium of instruction in all schools recognized by the State Government from the academic year 1994-95.

But, some private schools had taken permission to run the school in Kannada medium and are running in English medium, by violating the language policy.

Karnataka State unaided School Management Association has Questioned the language policy in different stages in the court. The full bench of the Hon'ble High court of Karnataka has quashed the Government order No. ED 24 PGC 1994, dated 24.4.1994 in W.P.No 14863/1994 (Education) dated 2.7.2008.

State Government questioned the above order dated 2.7.2008 before the Hon'ble Supreme Court of India vide WP No. 290/2009. The Hon'ble Supreme Court has issued an interim order dated 21.07.2009, directing to maintain the statues quo. The case was then transferred to the Constitutional Bench on 5.7.2013. The Hon'ble Supreme Court in Civil Appeal No. 5166-5190/2013 dated 6.5.2014 has ordered that "government cannot impose mother tongue for teaching children at primary level".

In the present situation, as the language policy of the State was rejected by the Hon'ble Supreme Court of India, the State Government has filed a Review Petition No. 1878-1911/2014. The Review Petition was dismissed on 9.9.2014.

Article 350A of Constitution is as follows:-

350A. facilities for instruction in mother-tongue at primary stage.- It shall be the endeavour of every State and of every local authority within the State to provide adequate facilities for instruction in the mother-tongue at the primary stage of education to children belonging to linguistic minority groups; and the President may issue such directions to any State as he considers necessary or proper for securing the provision of such facilities.

It is the constitutional duty of the concerned states to provide primary school education to the child in his/her mother tongue as per the Article 350A of the constitution. It was discussed in detail with Educationists, intellectuals and writers who unanimously opined the necessity of primary education in mother tongue.

Therefore, it is considered necessary to amend the Right of children to Free and Compulsory Education Act, 2009, (a Central Act 35 of 2009) to provide Primary Education (1st Std to 5th Std) in Child's mother tongue or in Kannada" in the State.

Hence the Bill.

## FINANCIAL MEMORANDUM

There is no extra expenditure involved in the proposed legislative measure.

**KIMMANE RATHNAKAR**
Minister for Primary and Secondary Education

**P. OMPRAKASHA**
Secretary
Karnataka Legislative Assembly

**ANNEXURE**

**THE RIGHT OF CHILDREN TO FREE AND COMPULSORY EDUCATION ACT, 2009 (Central Act No. 35 of 2009)**

**XXX XXX XXX**

**29. Curriculum and evaluation procedure:** (1) The curriculum and the evaluation procedure for elementary education shall be laid down by an academic authority to be specified by the appropriate Government, by notification.

(2) The academic authority, while laying down the curriculum and the evaluation procedure under sub-section (1), shall take into consideration the following, namely:-

(a) conformity with the values enshrined in the Constitution ;
(b) all round development of the child;
(c) building up child's knowledge, potentiality and talent;
(d) development of physical and mental abilities to the fullest extent;
(e) learning through activities discovery and exploration in a child friendly and child- cantered manner
(f) medium of instruction shall, as far as practicable, be in child's mother tongue;
(g) making the child free of fear trauma and anxiety and helping the child to express views freely;
(h) Comprehensive and continuous evaluation of child's understanding of knowledge and his or her ability to apply the same.

**XXX XXX XXX**

Government Press, Vikasa Soudha, Bengaluru, P7, W.D. 1204, Copies 750, 25th March, 2015